**ಕರ್ನಾಟಕ ಸರ್ಕಾರ**
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

---

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು -560 001**

---

**ಸಂಖ್ಯೆ: ವಾಇ: ಉನಿ:ಸುಮಪ:2016-17** **ದಿನಾಂಕ: 23-08-2016**

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ/ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಪತ್ರಿಕಾಗೋಷ್ಠಿ:<br><br>ಡಾ: ಶಾಲಿನಿ ರಜನೀಶ್,<br>ಪ್ರಧಾನ ಕಾರ್ಯದರ್ಶಿ,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 24-08-2016<br>ಬುಧವಾರ<br>ಬೆಳಿಗ್ಗೆ<br>10-30 ಗಂಟೆಗೆ | ಕೊಠಡಿ ಸಂಖ್ಯೆ 118<br>ಒಂದನೆ ಮಹಡಿ,<br>ವಿಕಾಸ ಸೌಧ,<br>ಬೆಂಗಳೂರು |
| 2 | ಪತ್ರಿಕಾಗೋಷ್ಠಿ:<br>ಎಸ್.ಜಿ. ನಂಜಯ್ಯನಮಠ,<br>ಅಧ್ಯಕ್ಷರು, ಕರ್ನಾಟಕ ಗೃಹ ಮಂಡಳಿ<br>ಬೆಂಗಳೂರು | 24-08-2016<br>ಬುಧವಾರ<br>ಬೆಳಿಗ್ಗೆ<br>10-30 ಗಂಟೆಗೆ | ಸಭಾಂಗಣ,<br>ಕರ್ನಾಟಕ ಗೃಹ ಮಂಡಳಿ<br>4 ನೇ ಮಹಡಿ,<br>ಕಾವೇರಿ ಭವನ<br>ಕೆ.ಜಿ. ರಸ್ತೆ,<br>ಬೆಂಗಳೂರು |
| 3 | ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿಯ ಪ್ರಾರಂಭಿಕ ಸಭೆ:<br><br>ಅಧ್ಯಕ್ಷತೆ:<br><br>ಡಿ.ಹೆಚ್. ಶಂಕರಮೂರ್ತಿ,<br>ಸಭಾಪತಿಗಳು,<br>ವಿಧಾನ ಪರಿಷತ್ | 24-08-2016<br>ಬುಧವಾರ<br>ಅಪರಾಹ್ನ<br>12-00 ಗಂಟೆಗೆ | ಕೊಠಡಿ ಸಂಖ್ಯೆ 28<br>ಇ- ಗ್ರಂಥಾಲಯ ಕೊಠಡಿ,<br><br>ನೆಲ ಮಹಡಿ,<br>ವಿಧಾನ ಸೌಧ,<br>ಬೆಂಗಳೂರು |
| 4 | ಪತ್ರಿಕಾಗೋಷ್ಠಿ:<br>ಪಿ.ಆರ್. ರಮೇಶ್,<br>ಅಧ್ಯಕ್ಷರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ | 24-08-2016<br>ಬುಧವಾರ<br>ಅಪರಾಹ್ನ<br>12-00 ಗಂಟೆಗೆ | ಮಂಡಳಿ ಸಭಾಂಗಣ,<br>ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ,<br>3 ನೇ ಮಹಡಿ, ನಂ. |

| | | | |
|---|---|---|---|
| | | | 55 ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ ಬೆಂಗಳೂರು-20 |
| 5 | ರವೀಂದ್ರ ಕಲಾಕ್ಷೇತ್ರ ಸುವರ್ಣ ಸಂಭ್ರಮ :<br>ಉದ್ಘಾಟನೆ:<br>ಸಿದ್ದರಾಮಯ್ಯ, ಮುಖ್ಯಮಂತ್ರಿಗಳು<br>ಮುಖ್ಯ ಅತಿಥಿಗಳು:<br>ಉಮಾಶ್ರೀ, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವರು | 24-08-2016 ಬುಧವಾರ ಸಂಜೆ 6-00 ಗಂಟೆಗೆ | ರವೀಂದ್ರ ಕಲಾಕ್ಷೇತ್ರ ಜೆ.ಸಿ. ರಸ್ತೆ, ಬೆಂಗಳೂರು |

ನಿರ್ದೇಶಕರ ಪರವಾಗಿ

ಪತ್ರಿಕಾ ಪ್ರಕಟಣೆ

# ಕೀ ಉತ್ತರ ಪ್ರಕಟ

ಬೆಂಗಳೂರು, ಆಗಸ್ಟ್ 23 (ಕರ್ನಾಟಕ ಸರ್ಕಾರ)

ಕರ್ನಾಟಕ ಲೋಕ ಸೇವಾ ಆಯೋಗವು ದಿನಾಂಕ: 21-08-2016 ರ ಭಾನುವಾರಂದು ನಡೆಸಲಾದ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿನ ಸಹಾಯಕ ನಿಯಂತ್ರಕರು ಮತ್ತು ಲೆಕ್ಕಪರಿಶೋಧನಾಧಿಕಾರಿ ಒಟ್ಟು 162 ಹುದ್ದೆಗಳ ಪೂರ್ವಭಾವಿ ಪರೀಕ್ಷೆಯ ಕೀ ಉತ್ತರಗಳನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗದ ವೆಬ್ ಸೈಟ್ http://kpsc.kar.ni.cin ನಲ್ಲಿ ಪ್ರಕಟಿಸಲಾಗಿದೆ.

ಕೀ ಉತ್ತರಗಳ ಬಗ್ಗೆ ಏನಾದರೂ ಬಗ್ಗೆ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಅಭ್ಯರ್ಥಿಗಳು ಇದನ್ನು ಪುಷ್ಟೀಕರಿಸುವ ಆಧಾರಗಳುಳ್ಳ ಪುಸ್ತಕಗಳ ಹೆಸರು, ಪ್ರಕಾಶನ ವಿಷಯ, ಪ್ರಶ್ನೆ ಸಂಖ್ಯೆ ಇತ್ಯಾದಿ ವಿವರಣೆಯೊಂದಿಗೆ ಆಯೋಗದ ವೆಬ್ ಸೈಟ್ ನಲ್ಲಿ ನೀಡಲಾಗಿರುವ ನಿಗದಿತ ನಮೂನೆಯಲ್ಲಿಯೇ ದಿನಾಂಕ 29-08-2016 ಕಛೇರಿ ವೇಳೆಯೊಳಗಾಗಿ ಪರೀಕ್ಷಾ ನಿಯಂತ್ರಕರು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗಸೌಧ, ಬೆಂಗಳೂರು -560 001 ಇವರಿಗೆ ಸಲ್ಲಿಸಬಹುದಾಗಿದೆ. ನಿಗದಿತ ನಮೂನೆಯಲ್ಲಿ ಆಯೋಗದ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿದೆ.

ಬಾಬು/ಕೆಎಂ

**GOK-NASSCOM Startup Warehouse, Bengaluru hosts the first Openhouse for Startups.**

**Bangalore, August 23 (Karnataka Information)**

The first ever Openhouse for Startups received a tremendous response. The Startup cell received over 100 applications for the event from a variety of sectors like Bio-technology, IOT, manufacturing etc, in response to its public call for applications. Fifteen Startups from shortlisted Startups interacted with the Minister; the Principal Secretary to Government, Department of Information Technology and Biotechnology; Managing Director, Karnataka Biotechnology Information Technology Services (KBITS), Ravi Gururaj, Member of NASSCOM's Executive Council, and the officers of the Startup cell. The Startups made a brief presentation on their work and highlighted the support required from the Government, in the form of funding, opportunity to conduct POCs, pilots for the Government etc.

The Minister Priyank Kharge mentioned that the Openhouse would be a monthly event. He stated that "the objective of the Openhouse is to have a one to one interaction with the Startups; understand the issues faced by them and extend appropriate support". He further added "We wish to promote Startups in all sectors, from agriculture to aviation."

Startups were enthusiastic about the outcomes of the event. Suraj Divakar Siddapura, Founder, Rectangle Automotive Technologies LLP was impressed by the initiative. "Our ideas and concepts were received well. The Honourable Minister showed a lot of interest. The session was very interactive and fruitful" added Aasim Mistry, Core Team Member, Personal Air Quality Systems (P) Ltd, an Electronics company.

Startups can register for the 'Openhouse' through startup.karnataka.gov.in/events.

**babu/km**

# ಸ್ಟಾರ್ಟ್‌ಅಪ್‌ನ ಮುಕ್ತ ಸಂವಾದ

ಬೆಂಗಳೂರು, ಆಗಸ್ಟ 23 (ಕರ್ನಾಟಕ ಸರ್ಕಾರ)

ಸ್ಟಾರ್ಟ್‌ಅಪ್‌ಗಳ ಮುಕ್ತ ಸಂವಾದಕ್ಕೆ ಅದ್ಭುತ ಪ್ರತಿಕ್ರಿಯೆ ದೊರೆತಿರುತ್ತದೆ. ಸ್ಟಾರ್ಟ್‌ಅಪ್ ಅರ್ಜಿಗಳಿಗಾಗಿ ಸಾರ್ವಜನಿಕ ಕರೆ ಮಾಡಿದ ಪ್ರಯುಕ್ತ, ಈ ಕಾರ್ಯಕ್ರಮಕ್ಕಾಗಿ ವಿವಿಧ ಕ್ಷೇತ್ರಗಳಾದ ಜೈವಿಕ ತಂತ್ರಜ್ಞಾನ, ಅಂತರ್ಜಾಲದ ತಂತ್ರಜ್ಞಾನ, ತಯಾರಿಕೆ ಇತ್ಯಾದಿಗಳಿಂದ ಸ್ಟಾರ್ಟ್‌ಅಪ್ ಕೋಶ 100 ಅರ್ಜಿಗಳನ್ನು ಸ್ವೀಕರಿಸಿರುತ್ತದೆ. ಅರ್ಜಿ ಸಲ್ಲಿಸಿರುವ ಸ್ಟಾರ್ಟ್‌ಅಪ್‌ಗಳ ಪೈಕಿ 15 ಆಯ್ಕೆಯಾದ ಸ್ಟಾರ್ಟ್‌ಅಪ್‌ಗಳು ಸಚಿವರು, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು, ರವಿ ಗುರುರಾಜ್, ನ್ಯಾಸ್ಕಾಂನ ಕಾರ್ಯಕಾರಿ ಪರಿಷತ್ತಿನ ಸದಸ್ಯರು ಮತ್ತು ಸ್ಟಾರ್ಟ್‌ಅಪ್ ಕೋಶದ ಅಧಿಕಾರಿಗಳೊಂದಿಗೆ ಪರಸ್ಪರ ಸಂವಾದ ನಡೆಸಿರುತ್ತಾರೆ. ಸ್ಟಾರ್ಟ್‌ಅಪ್‌ಗಳು ಅವರ ಕಾರ್ಯ ಚಟುವಟಿಕೆಯ ಕುರಿತು ಸಂಕ್ಷಿಪ್ತ ಪ್ರಾತ್ಯಕ್ಷಿಕವನ್ನು ಏರ್ಪಡಿಸಿ ಸರ್ಕಾರದಿಂದ ಬೇಕಾಗಿರುವ ಪ್ರಮುಖ ಸಹಾಯಗಳಾದ ಅನುದಾನ, ಪಿ.ಒ.ಸಿ. ಆಯೋಜಿಸಲು ಅವಕಾಶ, ಸರ್ಕಾರ ಮತ್ತು ಇತ್ಯಾದಿಗಳಿಗಾಗಿ ಪೈಲೆಟ್‌ಗಳನ್ನು ನೀಡುವಂತೆ ಕೋರಿರುತ್ತಾರೆ.

ಸಚಿವ ಪ್ರಿಯಾಂಕ್ ಖರ್ಗೆಯವರು "ಮುಕ್ತ ಸಂವಾದ ಕಾರ್ಯಕ್ರಮವನ್ನು ಮಾಸಿಕ ಕಾರ್ಯಕ್ರಮವಾಗಿ ಮಾಡಲಾಗುವುದು. ಮುಕ್ತ ಸಂವಾದ ಕಾರ್ಯಕ್ರಮದ ಉದ್ದೇಶವು ಸ್ಟಾರ್ಟ್‌ಅಪ್‌ಗಳೊಂದಿಗೆ ಪರಸ್ಪರ ಸಂವಾದ, ಅವುಗಳು ಎದುರಿಸುವ ಸಮಸ್ಯೆಗಳನ್ನು ಅರ್ಥೈಸುವುದು ಹಾಗೂ ಸೂಕ್ತ ಬೆಂಬಲವನ್ನು ನೀಡುವುದು" ಎಂದು ಹೇಳಿದರು. "ನಾವು ಸ್ಟಾರ್ಟ್‌ಅಪ್‌ಗಳನ್ನು ಕೃಷಿಯಿಂದ ಆಕಾಶಯಾನದವರೆಗೆ ಎಲ್ಲಾ ಕ್ಷೇತ್ರಗಳಲ್ಲಿ ಉತ್ತೇಜಿಸಲು ಆಶಿಸುತ್ತೇವೆ" ಎಂದು ಸಹ ಹೇಳಿದರು.

ಈ ಕಾರ್ಯಕ್ರಮದ ಫಲಿತಾಂಶದ ಬಗ್ಗೆ ಸ್ಟಾರ್ಟ್‌ಅಪ್‌ಗಳು ಉತ್ಸುಕವಾಗಿದ್ದವು. ಸುರಜ ದಿವಾಕರ್ ಸಿದ್ದಾಪುರ, ರೆಕ್ಟ್ಯಾಂಗಲ್ ಆಟೋಮೋಟೀವ್ ಟೆಕ್ನಾಲಜೀಸ್ ಎಲ್.ಎಲ್.ಪಿ.ನ ಸಂಸ್ಥಾಪಕರು ಈ ಪ್ರಾರಂಭಿಕೆಯ ಬಗ್ಗೆ ಪ್ರಭಾವಿತರಾಗಿದ್ದರು. ಆಸೀಮ್ ಮಿಸ್ತ್ರೀ, ಪರ್ಸನಲ್ ಏರ್ ಕ್ವಾಲಿಟಿ ಸಿಸ್ಟಮ್ಸ್, ಎಲೆಕ್ಟ್ರಾನಿಕ್ ಕಂಪನಿಯ ಜನಸಮುದಾಯ ತಂಡದ ಸದಸ್ಯರು "ನಮ್ಮ ಕಲ್ಪನೆ ಮತ್ತು ಪರಿಕಲ್ಪನೆಗಳನ್ನು ತುಂಬಾ ಚೆನ್ನಾಗಿ ಸ್ವೀಕರಿಸಲಾಯಿತು, ಸಚಿವರು ಬಹಳ ಆಸಕ್ತಿಯನ್ನು ತೋರಿಸಿದರು, ಈ ಸಭೆಯು ಪರಸ್ಪರ ಮತ್ತು ತುಂಬಾ ಫಲಪ್ರದವಾಗಿತ್ತು" ಎಂದು ತಿಳಿಸಿದರು.

ಸ್ಟಾರ್ಟ್‌ಅಪ್‌ಗಳು ಮುಕ್ತ ಸಂವಾದದ ಮೂಲಕ startup.karnataka.gov.in/events ರಲ್ಲಿ ನೋಂದಾಯಿಸಬಹುದು.

**babu/km**

# ಹೆಣ್ಣು ಮಕ್ಕಳ ಕಾರ್ಯ ನೀತಿ

ಬೆಂಗಳೂರು, ಆಗಸ್ಟ್ 23(ಕರ್ನಾಟಕ ವಾರ್ತೆ)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಹೆಣ್ಣು ಮಕ್ಕಳ ಸುರಕ್ಷತೆಗಾಗಿ ಅವರಿಗೆ ಸಿಗಬೇಕಾದ ನೈಜ ಹಕ್ಕುಗಳಾದ ಶಿಕ್ಷಣ, ಆರೋಗ್ಯ ಪೌಷ್ಠಿಕ ಆಹಾರ, ಜೀವನ ಕೌಶಲ್ಯ, ತರಬೇತಿ ಹಾಗೂ ಬಾಲ್ಯ ವಿವಾಹ, ಹೆಣ್ಣು ಮಕ್ಕಳ ಭ್ರೂಣಹತ್ಯೆ, ದೌರ್ಜನ್ಯ ಮುಂತಾದವುಗಳನ್ನು ತಡೆಗಟ್ಟಲು " ಕರ್ನಾಟಕ ರಾಜ್ಯ ಹೆಣ್ಣುಮಕ್ಕಳ ಕಾರ್ಯನೀತಿ-2015 ನ್ನು ಸಿದ್ದಪಡಿಸಿ ಇಲಾಖೆಯ ವೆಬ್‌ಸೈಟ್, **dwcdkar.gov.in, Home page Karnataka State girl child Action plan-2015 draft for comments and Suggestions"** ಎಂಬ ಶೀರ್ಷಿಕೆಯಡಿ ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಅಳವಡಿಸಲಾಗಿದೆ. ಸಾರ್ವಜನಿಕರು, ಶಿಕ್ಷಣ ಸಂಸ್ಥೆಗಳು, ಶಿಕ್ಷಕರು ಅಥವಾ ಯಾವುದೇ ವ್ಯಕ್ತಿಗಳೂ/ಸಂಸ್ಥೆಗಳು, ಈ ಕಾರ್ಯನೀತಿಯ ಬಗ್ಗೆ ಅಭಿಪ್ರಾಯಗಳನ್ನು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, 1ನೇಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇ-ಮೇಲ್ ವಿಳಾಸ **ddcw.dwvd@gmail.com, adcw.dwcd@gmail.com.**

ಬಾಬು:ಜಿಪಿಆರ್.

# ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ

ಬೆಂಗಳೂರು, ಆಗಸ್ಟ್ 23(ಕರ್ನಾಟಕ ವಾರ್ತೆ)

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯು 2016-17ನೇ ಸಾಲಿಗೆ ಮಂಡಳಿಗೆ ವಂತಿಗೆ ಪಾವತಿಸುವ ವಿವಿಧ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರ ಅರ್ಹ ಮಕ್ಕಳಿಂದ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯಕ್ಕಾಗಿ ಅರ್ಜಿಗಳನ್ನು ಕರೆಯಲಾಗಿದೆ.

ಹಿಂದಿನ ಸಾಲಿನಲ್ಲಿ ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಶೇಕಡ 50 ರಷ್ಟು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಸೇರಿದ ವಿದ್ಯಾರ್ಥಿಗಳು ಶೇಕಡಾ 45 ಅಂಕ ಪಡೆದು ಹಿಂದಿನ ಸಾಲಿನಲ್ಲಿ ತೇರ್ಗಡೆಹೊಂದಿರಬೇಕು.

2016-17 ನೇ, ಸಾಲಿನಲ್ಲಿ ಪ್ರೌಢಶಾಲೆ (8ನೇ ತರಗತಿ ಯಿಂದ 10 ನೇ ತರಗತಿವರಗೆ) ಮತ್ತು ಪಿ.ಯು.ಸಿ. ಐ.ಟಿ.ಐ. ಡಿ.ಇಡಿ., ಡಿಪ್ಲೋಮೊ ಹಾಗೂ ಪಿ.ಯು.ಸಿ.ಗೆ ತತ್ಸಮಾನವಾದ ತರಗತಿ, ಪದವಿ, ಸ್ನಾತಕೋತ್ತರ ಪದವಿ, ಇಂಜಿನಿಯರಿಂಗ್, ಮತ್ತು ವೈದ್ಯಕೀಯ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಈ ಕೆಳಗೆ ತಿಳಿಸಿರುವಕೊನೆಯ ದಿನಾಂಕದೊಳಗೆ ಅರ್ಜಿ ಸಲ್ಲಿಸಬೇಕಾಗಿರುತ್ತದೆ.

ಮಂಡಳಿಗೆ ವಂತಿಗೆ ಪಾವತಿಸುವ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ತಂದೆ/ತಾಯಿ/ಪೋಷಕರ ಮಾಸಿಕ ಸಂಬಳ ರೂ 15000/- ಗಳು ಮೀರದಂತಹ ಕಾರ್ಮಿಕರ ಮಕ್ಕಳು ಮಾತ್ರ ಈ ಯೋಜನೆಯಡಿಯಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಮಂಡಳಿಯ ವೆಬ್‌ಸೈಟ್ **www.klwb-kar.com** ನಲ್ಲಿ ಅರ್ಜಿ ಡೌನ್‌ಲೋಡ್ ಮಾಡಿಕೊಳ್ಳುವುದು.

ಭರ್ತಿಮಾಡಿದ ಅರ್ಜಿಗಳನ್ನು ಸೂಕ್ತ ದಾಖಲೆಯೊಂದಿಗೆ "ಕಲ್ಯಾಣ ಆಯುಕ್ತರು, ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಕಾರ್ಮಿಕ ಕಲ್ಯಾಣ ಭವನ,ನಂ 48, 2ನೇ ಮಹಡಿ, ಮತ್ತಿಕೆರೆ ಮುಖ್ಯರಸ್ತೆ, ಯಶವಂತಪುರ, ಬೆಂಗಳೂರು- 560 022' ಇವರಿಗೆ ದಿನಾಂಕ: 29-09-2016 ರಂದು ತಲುಪುವಂತೆ ಕಳುಹಿಸಬೇಕು.

ಹೆಚ್ಚಿನ ಮಾಹಿತಿಗಾಗಿ " "ಕಲ್ಯಾಣ ಆಯುಕ್ತರು, ಕರ್ನಾಟಕಕಾರ್ಮಿಕ ಕಲ್ಯಾಣ ಮಮಡಳಿ, ಕಾರ್ಮಿಕ ಕಲ್ಯಾಣ ಭವನ,ನಂ 48, 2ನೇ ಮಹಡಿ, ಮತ್ತಿಕೆರೆ ಮುಖ್ಯರಸ್ತೆ, ಯಶವಂತಪುರ, ಬೆಂಗಳೂರು- 560 022' (ದೂರವಾಣಿ ಸಂಖ್ಯೆ: 080-23570266) ಹಾಗೂ ಆಯಾ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳು, ತಾಲ್ಲೂಕು ಕೇಂದ್ರದಲ್ಲಿರುವ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರ ಕಚೇರಿಗಳನ್ನು ನೇರವಾಗಿ ಸಂಪರ್ಕಿಸಬಹುದಾಗಿದೆ.

ಬಾಬು:ಜಿಪಿಆರ್.

# ಬೆಂಗಳೂರಿನಲ್ಲಿ ಒಡಿಶಾ ಸರ್ಕಾರದಿಂದ ಬಂಡವಾಳ ಹೂಡಿಕೆದಾರರ ಮೇಳ

ಬೆಂಗಳೂರು, ಆಗಸ್ಟ್ 23(ಕರ್ನಾಟಕ ವಾರ್ತೆ)

ಒಡಿಶಾ ಸರ್ಕಾರದ ಕೈಗಾರಿಕಾ ಇಲಾಖೆಯು ಬೆಂಗಳೂರಿನಲ್ಲಿ ಆಗಸ್ಟ್ 25 ಮತ್ತು 26 ರಂದು ಎರಡು ದಿನಗಳ ಕಾಲ ಬಂಡವಾಳ ಹೂಡಿಕೆದಾರರ ಮೇಳವನ್ನು ಆಯೋಜಿಸಿದೆ.

ಈ ಕಾರ್ಯಕ್ರಮದ ಅಂಗವಾಗಿ ಆಗಸ್ಟ್ 26 ರಂದು ಅಪರಾಹ್ನ 12-00 ಗಂಟೆಗೆ ಬೆಂಗಳೂರಿನ ಹೋಟೆಲ್ ತಾಜ್ ವೆಸ್ಟ್‌ಎಂಡ್‌ನಲ್ಲಿ ಒಡಿಶಾ ಹೂಡಿಕೆ ವಿಚಾರ

ಸಂಕಿರಣವನ್ನು ಏರ್ಪಡಿಸಲಾಗಿದ್ದು, ಒಡಿಶಾ ರಾಜ್ಯದ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಹಾಗೂ ಆ ರಾಜ್ಯದ ಕೈಗಾರಿಕಾ ಸಚಿವರು ಪಾಲ್ಗೊಳ್ಳುವರು.

ಬಾಬು:ಜಿಪಿಆರ್.

## ಭಾರತೀಯ ಪನೋರಮ ಚಲನಚಿತ್ರೋತ್ಸವ

**ಬೆಂಗಳೂರು, ಆಗಸ್ಟ್ 23(ಕರ್ನಾಟಕ ವಾರ್ತೆ)**

ಕರ್ನಾಟಕ ಚಲನಚಿತ್ರ ಅಕಾಡೆಮಿ, ಬೆಂಗಳೂರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಶಿವಮೊಗ್ಗ,ಚಲನಚಿತ್ರೋತ್ಸವ ನಿರ್ದೇಶನಾಲಯ, ಭಾರತ ಸರ್ಕಾರ, ನವದೆಹಲಿ, ಶಿವಮೊಗ್ಗ ಬೆಳ್ಳಿಮಂಡಲ ಹಾಗೂಕರ್ನಾಟಕ ಸಂಘ, ಶಿವಮೊಗ್ಗ ಇವರ ಸಂಯುಕ್ತಾಶ್ರಯದಲ್ಲಿ ಶಿವಮೊಗ್ಗದಲ್ಲಿ ಭಾರತೀಯ ಪನೋರಮ ಚಲನಚಿತ್ರೋತ್ಸವ,

ಸದಭಿರುಚಿಯ ಚಲನಚಿತ್ರಗಳನ್ನು ಜನರ ಬಳಿಗೇ ಕೊಂಡೊಯ್ಯುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮೂಲಕ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ಅಂತೆಯೇ ಇಲಾಖೆಯ ಅಂಗ ಸಂಸ್ಥೆಯಾಗಿರುವ ಕರ್ನಾಟಕ ಚಲನಚಿತ್ರ ಅಕಾಡೆಮಿ ಪ್ರತಿ ಜಿಲ್ಲೆಯಲ್ಲೂ ಸ್ಥಾಪಿಸಿರುವ ಬೆಳ್ಳಿಮಂಡಲಗಳ ಮೂಲಕ ಚಲನಚಿತ್ರಗಳ ಕುರಿತಾಗಿ ವರ್ಷವಿಡೀ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಕನ್ನಡ ಚಿತ್ರರಂಗದಲ್ಲಿ ಆಗುತ್ತಿರುವ ಸೃಜನಶೀಲ ಬೆಳವಣಿಗೆಯನ್ನು ಹಾಗೂ ಯಶಸ್ವಿಯಾಗಿ ಜನಮೆಚ್ಚುಗೆಗಳಿಸುತ್ತಿರುವ ಹೊಸ ನಿರ್ದೇಶಕರ ಚಲನಚಿತ್ರಗಳನ್ನು ಹೊರ ರಾಜ್ಯದಲ್ಲಿ ಪ್ರದರ್ಶಿಸುವುದು ಹಾಗೂ ಹೊರ ರಾಜ್ಯ ಹಾಗೂ ವಿದೇಶಗಳ ಅತ್ಯುತ್ತಮ ಚರ್ಚಿತ ಚಿತ್ರಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಂಗ ಸಂಸ್ಥೆಯಾದ ಬೆಳ್ಳಿಮಂಡಲಗಳ ಸಹಭಾಗಿತ್ವದಲ್ಲಿ ರಾಜ್ಯದಲ್ಲಿ ಪ್ರದರ್ಶಿಸುವ ಮೂಲಕ ಕನ್ನಡ ಚಿತ್ರ ರಂಗದಲ್ಲಿ ಮತ್ತಷ್ಟು ಸೃಜನಶೀಲತೆಯನ್ನು ಹೆಚ್ಚಿಸುವುದು ಇದರ ಉದ್ದೇಶವಾಗಿದೆ.

ಈ ಹಿನ್ನೆಲೆಯಲ್ಲಿ ಇದೇ ಮೊದಲ ಬಾರಿಗೆ ಭಾರತೀಯ ಪನೋರಮ ಚಿತ್ರೋತ್ಸವವನ್ನು ಆಯೋಜಿಸಲಾಗಿದ್ದು, ಶಿವಮೊಗ್ಗದ ಕರ್ನಾಟಕ ಸಂಘ ಭವನ ಹಾಗೂ ಶಂಕರಘಟ್ಟದಲ್ಲಿನ ಕುವೆಂಪು ವಿಶ್ವ ವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಆಶ್ರಯದಲ್ಲಿ ಏಕಕಾಲದಲ್ಲಿ ಇದೇ ಆಗಸ್ಟ್ 25ರಿಂದ 27ರವರೆಗೆ ನಡೆಯಲಿದೆ.

ಕರ್ನಾಟಕ ಸಂಘ ಭವನದಲ್ಲಿ ನಡೆಯುವ ಈ ಚಿತ್ರೋತ್ಸವವನ್ನು ಆಗಸ್ಟ್25ರ ಮಧ್ಯಾಹ್ನ 1ಕ್ಕೆ ಜಿಲ್ಲಾಧಿಕಾರಿಗಳು ಹಾಗೂ ಶಿವಮೊಗ್ಗ ಬೆಳ್ಳಿ ಮಂಡಲದ ಗೌರವ ಅಧ್ಯಕ್ಷರೂ ಆದ ಶ್ರೀ ವಿ.ಪಿ.ಇಕ್ಕೇರಿ ಅವರು ಉದ್ಘಾಟಿಸಲಿದ್ದು, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷರಾದ ಶ್ರೀ ಎಸ್.ವಿ.ರಾಜೇಂದ್ರಸಿಂಗ್ ಬಾಬು ಅಧ್ಯಕ್ಷತೆ ವಹಿಸಲಿದ್ದಾರೆ. ಚಿತ್ರೋತ್ಸವ ಕುರಿತಾಗಿ ಹೆಸರಾಂತ ಚಲನಚಿತ್ರ ವಿಮರ್ಶಕ ಶ್ರೀ ಎನ್.ವಿದ್ಯಾಶಂಕರ್ ಹಾಗೂ ಪ್ರಾಸ್ತಾವಿಕವಾಗಿ ಕರ್ನಾಟಕ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಹೆಚ್.ಬಿ.ದಿನೇಶ್ ಮಾತನಾಡಲಿದ್ದಾರೆ. ಚಲನಚಿತ್ರ ನಿರ್ಮಾಪಕ

ಹಾಗೂ ಶಿವಮೊಗ್ಗ ಬೆಳ್ಳಿಮಂಡಲದ ಕಾರ್ಯಾಧ್ಯಕ್ಷ ಡಾ.ಕೆ.ಎ.ಅಶೋಕ್ ಪೈ ಉಪಸ್ಥಿತರಿರಲಿದ್ದಾರೆ.

ಉದ್ಘಾಟನೆ ಕಾರ್ಯಕ್ರಮ ನಂತರ ಮೊದಲ ಚಿತ್ರವಾಗಿ ದಿ ಕೋರ್ಟ್ (ಮರಾಠಿ/160 ನಿಮಿಷಗಳು/ನಿರ್ದೇಶಕ ಚೈತನ್ಯ ತಮ್ಹಾನೆ) ಪ್ರದರ್ಶನಗೊಳ್ಳಲಿದೆ.

ಪ್ರದರ್ಶಿಸಲ್ಪಡುವ ಚಿತ್ರಗಳು

ದಿನಾಂಕ ಪ್ರದರ್ಶನ ಸಮಯ ಚಿತ್ರ ಹೆಸರು ಭಾಷೆ ನಿರ್ದೇಶನ ಅವಧಿ ಬಿಡುಗಡೆ ವರ್ಷ

25.06.2016 ಸಂ: 6.30 ಎಲಿಜಬತ್
ಏಕಾದಶಿ ಮರಾಠಿ ಪರೇಶ್ ಮೊಕಾಶಿ 90 ನಿಮಿಷ 2014

26.08.2016 ಸಂ: 4.30 ಹೆಡ್ ಹಂಟರ್ ವಾಂಚೋ
(ಅರುಣಾಚಲಿ) ನಿರಂಜನ್ ದತ್ತ 2015
ಸಂ;6.30 ಸಿನಿಮಾವಾಲಾ ಬೆಂಗಾಲಿ ಕೌಶಿಕ್ ಗಂಗೂಲಿ 2016

27.08.2016 ಸಂ: 4.30 ಮಸಾನ್ ಹಿಂದಿ ನೀರಜ್ ಗೈವಾನ್ 109ನಿಮಿಷ 2015
ಸಂ: 6.30 ಕತ್ಯಾರ್ ಕಲಿಜಿತ್ ಗೂಸ್ಲಿ ಮರಾಠಿ ಸುಬೋಧ ಭಾವೆ 162 ನಿಮಿಷ 2015